ಕುರಿತು ಮಾಹಿತಿ ನೀಡಿ ಹೇಳುತ್ತಿದ್ದರು. ಅಂದರೆ ಗದ್ದೆ ಪರಿಚಯದೊಂದಿಗೆ ತಮ್ಮ ಸಂಬಂಧ ಹೇಳುವ ಮೂಲಕ ತಮ್ಮ ಹಾಗೂ ಊರಿನ ಸಂಬಂಧ ವಿಶಿಷ್ಟವಾಗಿ ತೆರೆದಿಡುತ್ತಿದ್ದರು.

'ಇಂತಹ ಊರು ನಮಗೆ ಸಂಬಂಧ ಯಾಕೆಂದರೆ ಅಲ್ಲಿ ನಮಗೆ ಗದ್ದೆ ಇದೆ' ಎಂದೇ ಮಾತಾಡುತ್ತಿದ್ದರು. ಪ್ರತಿ ಮಾತು, ಅವರ ಅನುಭವ ಎಲ್ಲದಕ್ಕೂ ಸಸ್ಯಜೀವ ಹೊಂದಿಕೊಂಡಿತ್ತು. ತುಳಸಿ ಉಸಿರು ಸಸಿಯಲ್ಲಿಯೇ ಬೆರೆತು ಹೋಗಿದ್ದು ಅವರು ಮುಂದೆ ಲಕ್ಷಾಂತರ ಗಿಡ ನೆಡಲು ಕಾರಣವಾಗಿರಬಹುದು.

ತುಳಸಿ ಅವರಿಗೆ ಹನ್ನೆರಡು ವರ್ಷವಾದಾಗ ಮದುವೆ ಮಾಡಿದ್ದರು. ಗೋವಿಂದ ಗೌಡನಿಗೆ ಅದಾಗಲೇ ಮೂವತ್ತು ದಾಟಿತ್ತು. ಬೇಸಾಯ ಮಾಡುವಾಗ ಒಳ್ಳೆಯ 'ಹೊಂತಗಾರ' ಗೋವಿಂದ ಗೌಡನನ್ನು ನೋಡಿ ನೀಲಿ ತನ್ನ ಮಗಳನ್ನು ಮದುವೆ ಮಾಡಿಕೊಟ್ಟಳು. ಮನೆ ಅಳಿಯನನ್ನಾಗಿ ತನ್ನ ಮನೆ ಹೊನ್ನಳ್ಳಿಯಲ್ಲಿಯೇ ಉಳಿಸಿಕೊಂಡಳು. ತುಳಸಿಗೆ ಹಿರಿ ಮಗಳಾಗಿ ಹುಟ್ಟಿದವಳು ಸೋಮಿ. ತುಳಸಿಯ ಮಗನ ಹೆಸರು ಸುಬ್ರಾಯ. ಸೋಮಿಯನ್ನು ತುಂಬಿದ ಮನೆಗೆ ಮದುವೆ ಮಾಡಿಕೊಟ್ಟ ತುಳಸಿ, ಮಗ ಸುಬ್ರಾಯನೊಂದಿಗೆ ಹೊನ್ನಳ್ಳಿಯ ಮನೆಯಲ್ಲಿ ಇದ್ದರು. ತುಳಸಿಯ ಗಂಡ ಗೋವಿಂದ ಕುಡುಕನಾಗಿರಲಿಲ್ಲ. ಅಂದಿನ ಕಾಲದಲ್ಲಿ ಹಾಲಕ್ಕಿ ಗಂಡಸರು ಹೆಚ್ಚಿನವರು ಕುಡಿತಕ್ಕೆ ಬಲಿಯಾಗುತ್ತಿದ್ದರು. ಆದರೆ ಗೋವಿಂದನಿಗೆ ಯಾವುದೇ ದುಶ್ಚಟಗಳಿರಲಿಲ್ಲ. ಗೋವಿಂದ ತುಳಸಿಯ ಜೊತೆ ಬಹುಕಾಲವಿರಲಿಲ್ಲ. ಮಗ ಸುಬ್ರಾಯನಿಗೆ ಮಗಳು ನೀಲಾ ಹುಟ್ಟಿದ ಹೊತ್ತಲ್ಲಿ ಗೋವಿಂದ ಗೌಡ ತೀರಿಕೊಂಡರು. 'ಗಂಡನಿಗೆ ಯಾವುದೇ ಕಾಯಿಲೆ ಇರಲಿಲ್ಲ. ವಯಸ್ಸಾಗಿಯೇ ತೀರಿಕೊಂಡರು' ಎನ್ನುತ್ತಿದ್ದರು ತುಳಸಿ.

ತುಳಸಿ ನರ್ಸರಿ ಕೆಲಸಕ್ಕೆ ಹೋದದ್ದು ಆಕಸ್ಮಿಕವಾಗಿ. ಮೊದಲು ಅವರ ತಾಯಿಯವರು ನರ್ಸರಿ ಕೆಲಸಕ್ಕೆ ಹೋಗುತ್ತಿದ್ದರು. ಕ್ರಮೇಣ ತುಳಸಿಯ ತಾಯಿಗೆ ಕೃಷಿ ಕೆಲಸ ಹಾಗೂ ನರ್ಸರಿ ಕೆಲಸ ಒಟ್ಟೊಟ್ಟಿಗೆ ಮಾಡಲು ತುಂಬ ತ್ರಾಸದಾಯಕವಾದ ಕಾರಣ ಮಗಳು ತುಳಸಿಯನ್ನು ನರ್ಸರಿ ಕೆಲಸಕ್ಕೆ ಕಳುಹಿಸಿದರು. ತನ್ನ ನಂತರ ಮಗಳು ಆ ಕೆಲಸವನ್ನು ಮುಂದುವರೆಸಲಿ ಎಂಬುದು ತುಳಸಿಯ ತಾಯಿಯ ಆಸೆಯಾಗಿತ್ತು. ಆ ಸಮಯದಲ್ಲಿ ತುಳಸಿಗೆ ಮೂರು ತಿಂಗಳ ಕೂಸಿತ್ತು. ತುಳಸಿಯ ಗಂಡ ಗೋವಿಂದ ಮತ್ತು ನೀಲಿ ಸೇರಿ ಮಗುವಿನ ಲಾಲನೆ ಮಾಡತೊಡಗಿದರು. ತುಳಸಿ ಕೆಲಸಕ್ಕೆ ಹೋಗತೊಡಗಿದಳು. ಆಗ ದಿನಕ್ಕೆ ಒಂದು ಕಾಲು ರೂಪಾಯಿ ಕೊಡುತ್ತಿದ್ದರು.

ನರ್ಸರಿಯಲ್ಲಿ ವರ್ಷಪೂರ್ತಿ ಕೆಲಸವಿರುತ್ತಿತ್ತು. ಆದರೆ ಕೂಲಿ ಮಾತ್ರ ಕಡಿಮೆ ಸಿಗುತ್ತಿತ್ತು. ಹೀಗಿರುವಾಗ ಬಹಳ ಹೆಂಗಸರು ಕೆಲಸವನ್ನು ಅರ್ಧಕ್ಕೆ ಬಿಡುತ್ತಿದ್ದರು. ಆದರೆ ತುಳಸಿ ಎಂದಿಗೂ ಹಣದ ಬಗ್ಗೆ ತಲೆಕೆಡಿಸಿಕೊಂಡವರಲ್ಲ. ಸಿಕ್ಕಷ್ಟೆ ಹಣ ಸಾಕು ಎಂದು ತೃಪ್ತಿ ಹೊಂದಿದ ಜೀವ. ಹೀಗಾಗಿ ಮುಂದಿನ ನಲವತ್ತೈದು ವರ್ಷ ಕೆಲಸ ಮುಂದುವರೆಸಿದರು. ಮೊದ ಮೊದಲು ತುಳಸಿ ಅವರ ಜೊತೆ ಕೆಲಸಕ್ಕೆ ಸೇರಿದವರು ಒಂದು ವಾರ ಕಳೆಯುವಷ್ಟರಲ್ಲೇ ಕೆಲಸ ಬಿಡಲು ಆರಂಭಿಸಿದಾಗ ತುಳಸಿ ಅವರ ಮನೆಗೆ ಹೋಗಿ, ಒತ್ತಾಯಿಸಿ ಕೆಲಸಕ್ಕೆ ಕರೆತರುತ್ತಿದ್ದರು. 'ನಂತರ ವೇತನ ಹೆಚ್ಚಾದರೂ ಆಗಬಹುದು ಕೆಲಸ ಬಿಡಬೇಡಿ ಇದು ಒಳ್ಳೆಯ ಕೆಲಸ' ಎಂದು ಒತ್ತಾಯಿಸುತ್ತಿದ್ದರು. ತುಳಸಿಯ ಹಾಗೆ ಪ್ರೀತಿಯಿಂದ ಕೆಲಸ ಮಾಡಿದವರು ಬಹಳ ಕಡಿಮೆ. ಅರಣ್ಯ ಇಲಾಖೆಯವರು ತುಳಸಿಯ ಕೆಲಸದ ನಿಷ್ಠೆಯನ್ನು ನೋಡಿ ಅವರನ್ನು ಕಾಯಂಗೊಳಿಸಿದ್ದರು.

ಗಿಡಗಳಿಗೆ ನೀರು ಹಾಕುವುದು, ಓಳಿ ತೆಗೆಯುವುದು, ಹಿತ್ತಿಲು ಮಾಡುವುದು, ನೀಲಗಿರಿ ಗಿಡ ನೆಡುವುದು, ಸಾಗವಾನಿ, ಹೊನ್ನೆ, ಮತ್ತಿ, ಕಿಂದಳು, ಸುರಹೊನ್ನೆ ಬೀಜ ಹಾಕಿ ಗಿಡ ಮಾಡುವುದು ನಂತರ ಅದೇ ಗಿಡವನ್ನು ಕಾಡಿನಲ್ಲಿ ನೆಟ್ಟು ಪೋಷಿಸುವುದು. ಅವು ಮರವಾಗುವವರೆಗೂ ಗಮನಿಸುವುದು ಇವೆಲ್ಲ ಕೆಲಸವನ್ನು ತುಳಸಿ ಹಚ್ಚಿಕೊಂಡು ಮಾಡುತ್ತಿದ್ದರು.



ತುಳಸಿ ಅವರಿಗಿದ್ದ ಕಾಡಿನ ಜ್ಞಾನ ಅಪಾರ. ಬೀಜೋಪಚಾರ, ಅವು ಮೊಳಕೆಯೊಡೆಯಲು ರೂಪಿಸುವ ತಂತ್ರ, ಒಂದೂ ಬೀಜ ಹಾಳಾಗದಂತೆ ರಕ್ಷಿಸುವ ಬಗೆ, ಪ್ರತಿ ಬೀಜವೂ ಸಸಿಯಾಗುವಂತೆ ಮಾಡುವ ನೈಪುಣ್ಯ ಇವೆಲ್ಲ ತಮ್ಮ ಕಾಡಿನ ಜೀವನಾನುಭವದ ವಿಶ್ವವಿದ್ಯಾಲಯದಲ್ಲಿ ಗಳಿಸಿಕೊಂಡಿದ್ದರು ತುಳಸಿ. ಕೆಲವೊಮ್ಮೆ ಇವರಿಗೆ ಕಾಡಿನಲ್ಲಿ ಬೀಜ ಸಿಗುತ್ತಿರಲಿಲ್ಲ. ಆಗ ತನಗೆ ಪರಿಚಯವಿದ್ದ ಅನೇಕರಿಗೆ ಕಾಡಿಗೆ ಹೋದಾಗ ಬೀಜ ಸಿಕ್ಕರೆ ತಂದು ಕೊಡಿ ಎಂದು ಕೇಳಿಕೊಂಡಿದ್ದ ಘಟನೆಗಳು ಬಹಳ ಇವೆ. ಇವರ ಒತ್ತಾಯಕ್ಕೆ ಮಣಿದು ಇಲಾಖೆಯವರು ಕೆಲವೊಮ್ಮೆ ದೂರದೂರಿನವರಿಗೆ ಹೇಳಿ ಬೀಜ ತರಿಸಿಕೊಡುತ್ತಿದ್ದರು. ತುಳಸಿಯದು ಮಾತು ಕಡಿಮೆ. ಕೆಲಸ ಜಾಸ್ತಿ ಆಗಿತ್ತು. ಅದರಲ್ಲಿಯೂ ಗಿಡ ನೆಡುವ, ಬೀಜ ಸಂಗ್ರಹಿಸುವ ಕೆಲಸದಲ್ಲಿ ತೊಡಗಿದರೆ ಅವರಿಗೆ ಬೇರಾವ ನೆನಪಿನ ಹಂಗೂ ಇರುತ್ತಿರಲಿಲ್ಲ. ಅಪಾರ ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದರು.

'ಚಿಕ್ಕಂದಿನಿಂದಲೂ ತಾಯಿಯ ಜೊತೆ ಸೌದೆಗೆ, ಕಾಡಿನ ಹಣ್ಣುಗಳನ್ನು ಕೊಯ್ಯಲು, ಹುಳಿಸೊಪ್ಪಿಗೆ, ಮದ್ದಿಗೆ ಗಿಡಗಳನ್ನು ಅರಸುತ್ತ ಹೋಗುವ ರೂಢಿ ಇದ್ದ ಕಾರಣ ನರ್ಸರಿ ಸೇರಿದ ಮೇಲೆ ಬಹಳ ಅನುಕೂಲವಾಯಿತು. ಹೊನ್ನಳ್ಳಿಯ ಕಾಡಲ್ಲಿ ಎಲ್ಲೆಲ್ಲಿ ಯಾವ ಮರಗಳಿವೆ ಎಂಬ ಪರಿಚಯವಿತ್ತು ನನಗೆ. ಹೀಗಾಗಿ ಯಾವ ಕಾಲದಲ್ಲಿ ಯಾವ ಮರಗಳ ಬೀಜಗಳನ್ನು ಹೇಗೆ ಸಂಗ್ರಹಿಸಬೇಕು ಎಂಬುವ ಜ್ಞಾನ ಚಿಕ್ಕಂದಿನಿಂದಲೇ ತಿಳಿದಿತ್ತು' ಎಂದು ನೆನಪಿಸಿಕೊಂಡಿದ್ದರು ತುಳಸಿ.

'ನಾವು ಮಾಡುವ ಕೆಲಸ ಶ್ರದ್ಧೆಯಿಂದ ಕೂಡಿದ್ದರೆ ಅದಕ್ಕೆ ಒಂದಿಲ್ಲೊಂದು ದಿನ ಫಲ ಬಂದೇ ಬರುತ್ತದೆ. ಕೆಲಸ ಯಾವುದಾದರೇನು ಶ್ರದ್ಧೆ ಮುಖ್ಯ' ಎಂದು ಹೇಳುತ್ತಿದ್ದ ತುಳಸಿ ಗೌಡ ಅವರು ಯಾವುದೇ ಸಮಾರಂಭದಲ್ಲಿ ಭಾಗವಹಿಸಿದರೂ ಎಲ್ಲರಿಗೂ ಗಿಡ ನೆಡಿ ಎಂಬ ಮಾತನ್ನೇ ಆಡುತ್ತಿದ್ದರು. ತುಳಸಿ ನರ್ಸರಿಯಲ್ಲಿ ಅನೇಕಾನೇಕ ಗಿಡಗಳನ್ನು ನೆಡುವುದರ ಜೊತೆಗೆ ಮನೆಯಲ್ಲಿಯೂ 'ಮಡಿ' ಮಾಡಿ ಕೆಲವು ಬೀಜ ಹಾಕಿ ಸಸಿ ಮಾಡುತ್ತಿದ್ದರು. ಅಂತಹ ಗಿಡಗಳನ್ನು ಶಾಲೆಯ ಎದುರಿಗೆ, ಹೆದ್ದಾರಿ ಅಕ್ಕಪಕ್ಕ, ಮನೆಯ ಬದಿಗೆ, ಬೇರೆಯವರ ಖಾಲಿ ಇದ್ದ ಜಾಗದಲ್ಲಿ ನೆಟ್ಟಿದ್ದಾರೆ. ಅವೆಲ್ಲ ಈಗ ಮರಗಳಾಗಿವೆ.

ಗಿಡ ಬೆಳೆಸುವುದರಲ್ಲೇ ತಮ್ಮ ಇಡೀ ಜೀವನವನ್ನು ಸವೆಸಿದ ತುಳಸಿಗೆ ಕಾಡಿನ ಮರಗಳ ಸದ್ದು ಆಲಿಸುವಷ್ಟು, ಅವುಗಳ ಮಿಡಿತ ತಿಳಿಯುವಷ್ಟು ವಿಷಯಗಳು ಗೊತ್ತಿದ್ದವು. ತನ್ನ ನಿಸ್ವಾರ್ಥ ಸೇವೆಯಿಂದ ಪರಿಸರದ ಉಳಿವಿಗೆ ಕಾರಣರಾಗಿದ್ದ ತುಳಸಿ, 2020ನೇ ಸಾಲಿನ ಪದ್ಮಶ್ರೀ ಪಡೆದರು. ಜಾನಪದ ಕೋಗಿಲೆ ಸುಕ್ರಿ ಬೊಮ್ಮ ಗೌಡ ಅವರ ಬಳಿಕ ಪ್ರಶಸ್ತಿಗೆ ಭಾಜನರಾದ ಜಿಲ್ಲೆಯ ಹಾಲಕ್ಕಿ ಸಮುದಾಯದ ಎರಡನೇ ಮಹಿಳೆ ಎಂಬ ಖ್ಯಾತಿಗೆ ತುಳಸಿ ಪಾತ್ರರಾಗಿದ್ದರು. 'ಈ ಪ್ರಶಸ್ತಿ ಪಡೆಯುವಾಗ ಹೇಗನಿಸಿತು ತುಳಸಜ್ಜಿ' ಎಂದರೆ ನಗುತ್ತ ನನ್ನ ತಲೆ ಮೇಲೆ ಕೈಯಿಟ್ಟಿದ್ದರು.

'ನಂಗೆ ಖುಸಿ ಆಯ್ತೆ ತಂಗಿ, ಅಲ್ಲಿ ದೊಡ್ಡ ದೊಡ್ಡ ಸಾಹೇಬ್ರೆಲ್ಲ ಇದ್ರು. ಇಂತಾದೆಲ್ಲಾ ಬರುದ್ ಎಂದೆ ಮಾಡಾನಿಲ್ಲಾ. ನಾ ಕೆಲ್ಸಾ ಮಾಡ್ತೆನೆ ಊಳ್ದೆ. ಈ ಪ್ರಶಸ್ತಿ ನಂಗ್ ಬರೂದು, ಹಿಂಗೆ ಎಲ್ಲಾರು ನೋಡೂಕೆ ಮಾತಾಡೂಕೆ ಬರೂರು ಎಂದ್ ಗುತ್ತಿರನಿಲ್ಲಾ' ಎಂದಿದ್ದರು.

ಮಕ್ಕಳನ್ನು ಹೆತ್ತು ಬೆಳೆಸಿದ್ರೆ ನಮಗಷ್ಟೆ ಆಗತಾರೆ. ಸಸಿಗಳನ್ನು ಬೆಳೆಸಿದ್ರೆ ಅವು ಮುಂದಿನ ಏಳೇಳು ತಲೆಮಾರುಗಳನ್ನು ಬೆಳೆಸುತ್ತವೆ ಎನ್ನುತ್ತಲೇ, ಸಸಿ ಸಸಿ ಎಂದು ಹೋಗಿ ಬಂದವರ ಬಳಿ ಮಾತಾಡುತ್ತಿದ್ದ ತುಳಸಿ ಗೌಡ ಇದ್ದಕ್ಕಿದ್ದಲ್ಲೆ ಉಸಿರು ನಿಲ್ಲಿಸಿಬಿಟ್ಟರು. ಅವರು ನೆಟ್ಟ ಲಕ್ಷಾಂತರ ಮರಗಳು ಎಲೆ ಉದುರಿಸಿ ನಮನಗೈಯುತಿವೆ. ಹೇಮಂತ ಮೌನವಾಗಿದ್ದಾನೆ.

ಪ್ರತಿಕ್ರಿಯಿಸಿ: feedback@sudha.co.in